
ಆರೋಗ್ಯ

# ಮಕ್ಕಳಲ್ಲಿ ಸೋಂಕು; ಪರಿಹಾರವೇನು?

ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕೊರತೆಯಿಂದಾಗಿ ಬಹುಬೇಗ ಸೋಂಕು ಹರಡುತ್ತದೆ. ಪ್ರಾಥಮಿಕ ರೋಗ ನಿರೋಧಕ ಶಕ್ತಿ ಕಡಿಮೆಯಾಗಲು ಆನುವಂಶೀಯತೆಯೇ ಕಾರಣ.

■ ಉಮಾ ವೇಣೂರು



ಪುಟಾಣಿ ಸಾಯಿರಾಗೆ ಈಗ ಐದು ವರ್ಷ ತುಂಬಿದೆ. ಮಗು ಹುಟ್ಟಿದಂದಿನಿಂದಲೂ ಒಂದಲ್ಲ ಒಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಲೇ ಇತ್ತು. ನಾಲ್ಕು ತಿಂಗಳ ಮಗು ಇರುವಾಗ ನ್ಯುಮೋನಿಯ ಹಾಗೂ ಚರ್ಮದ ಸೋಂಕಿನಿಂದ ಆಸ್ಪತ್ರೆಗೂ ದಾಖಲಾಗಿತ್ತು. ಅದಾಗಿ ಸತತವಾಗಿ ಆಂಟಿ ಬಯೋಟಿಕ್ಸ್‌ಗೆ ಮೊರೆ ಹೋಗಬೇಕಾಗಿ ಬಂತು. ಮೂರು ವರ್ಷ ತುಂಬುತ್ತಿರುವಾಗ ಶ್ವಾಸಕೋಶ ಸಮಸ್ಯೆ, ಟಿಬಿ ಮುಂತಾಗಿ ವೈದ್ಯರು ಹೇಳಿ ಸೋಂಕು ತೀವ್ರತರವಾಗಿದೆ ಎಂದು ಅಭಿಪ್ರಾಯಪಟ್ಟರು. ಮಗುವನ್ನು ಪರೀಕ್ಷಿಸಿದ ಎಲ್ಲ ವೈದ್ಯರದ್ದು ಒಂದೇ ಉತ್ತರ. 'ಮಗು ತೀವ್ರ ಸೋಂಕಿಗೆ ಒಳಗಾಗಿದೆ. ಇದನ್ನು ಚಂಡೀಗಢದ ಆಸ್ಟರ್ ಸಿಎಂಐ ಆಸ್ಪತ್ರೆಗೆ ದಾಖಲಿಸಿ' ಎಂದು. ಕೊನೆಗೆ ವೈದ್ಯರ ಶಿಫಾರಸಿನ ಮೇರೆಗೆ ಚಂಡೀಗಢದಲ್ಲಿರುವ ಪ್ರಾಥಮಿಕ ರೋಗ ನಿರೋಧಕ ಚಿಕಿತ್ಸಾ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಈಗ ಮಗು ಸಂಪೂರ್ಣವಾಗಿ ಚೇತರಿಸಿಕೊಂಡಿದೆ.

* * *

ಬೆಂಗಳೂರಿನ ಹರ್ಷ ನಾಗೇಂದ್ರ 13 ವರ್ಷದ ಹುಡುಗ. ಹುಟ್ಟಿದಾಗ ನಾರ್ಮಲ್ ಇದ್ದ ಮಗುವಿಗೆ ಒಂದು ತಿಂಗಳಾದಾಗ ಮೆದುಳಿನ ಸೋಂಕು ಉಂಟಾಯಿತು. ಆಸ್ಪತ್ರೆಗೆ ದಾಖಲಿಸಿ 15–20 ದಿನಗಳ ಚಿಕಿತ್ಸೆಯ ಬಳಿಕ ಮಗು ಚೇತರಿಸಿಕೊಂಡರೂ ಸತತವಾಗಿ ಏನಾದರೊಂದು ಸೋಂಕಿಗೆ ತುತ್ತಾಗಿ ಪ್ರತಿ ತಿಂಗಳೂ ಆಸ್ಪತ್ರೆಗೆ ದಾಖಲಾಗಬೇಕಾದ ಪ್ರಸಂಗ ಒದಗಿ ಬರುತ್ತಲೇ ಇತ್ತು. ಹೀಗಾಗಿ ಬೆಂಗಳೂರಿನಲ್ಲಿರುವ ಮಣಿಪಾಲ ಆಸ್ಪತ್ರೆಯ ವೈದ್ಯರು ಮಗುವನ್ನು ಚಂಡೀಗಢದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಿದರು. ಅಲ್ಲಿ ಐವಿಐಜಿ ಇಂಜೆಕ್ಷನ್ ನೀಡಲಾಗಿ ಮಗು ಚೇತರಿಸಿಕೊಂಡಿತ್ತು. ಈ ಒಂದು ಇಂಜೆಕ್ಷನ್‌ಗೆ 15 ಸಾವಿರ ರೂಪಾಯಿ ಖರ್ಚು ಮಾಡಬೇಕಿತ್ತು. ಆದರೂ ಚಿಕಿತ್ಸೆ ಯಶಸ್ವಿಯಾಗಿ ಮಗು ಚೇತರಿಸಿಕೊಂಡಿದೆ.

* * *

ಈ ಮೇಲಿನ ಎರಡೂ ಉದಾಹರಣೆಗಳು ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕೊರತೆಗೆ ಸಂಬಂಧಿಸಿದ್ದು. ಈ ಸಮಸ್ಯೆ ಆನುವಂಶೀಯ ತೊಂದರೆಯಿಂದ ಬರುವಂಥದ್ದು. ರೋಗ ನಿರೋಧಕ ಶಕ್ತಿಯ ವಿಪರೀತ ಕೊರತೆಯಿಂದಾಗಿ ಮಕ್ಕಳಿಗೆ ಬಹುಬೇಗ ವಿವಿಧ ರೀತಿಯ ಸೋಂಕು ತಗಲುತ್ತದೆ. ಮನೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದರೆ ಈ ಸೋಂಕು ಬಹುಬೇಗನೆ ಹರಡುತ್ತದೆ. ವಂಶವಾಹಿ ತೊಂದರೆ ಉಂಟಾಗಲು ಪ್ರಮುಖ ಕಾರಣ ಅತಿ ಹತ್ತಿರದ ಅಥವಾ ಸೋದರ ಸಂಬಂಧದಲ್ಲಿ ಮದುವೆಯಾಗುವುದು.

'ಒಂದು ಅಂಕಿ ಅಂಶದ ಪ್ರಕಾರ ಪ್ರತಿ 2000 ಮಕ್ಕಳಲ್ಲಿ ಒಂದು ಮಗು ಈ ತೀವ್ರತರದ ಸೋಂಕಿನಿಂದ ಬಳಲುತ್ತದೆ. ಪ್ರತೀವರ್ಷ ಇಂತಹ ಸೋಂಕಿನಿಂದ ಬಳಲುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಕಳೆದ ಎರಡು ವರ್ಷಗಳಿಂದೀಚೆಗೆ ಚಂಡೀಗಢದಲ್ಲಿ 400, ಮುಂಬಯಿಯಲ್ಲಿ 300, ಕರ್ನಾಟಕದಲ್ಲಿ 50 ಮಕ್ಕಳು ಪ್ರಾಥಮಿಕ ರೋಗ ನಿರೋಧಕ ಕೊರತೆಯಿಂದ ಬಳಲುತ್ತಿರುವುದು ಪತ್ತೆಯಾಗಿದೆ' ಎನ್ನುತ್ತಾರೆ ಬೆಂಗಳೂರಿನ ಹೆಬ್ಬಾಳದಲ್ಲಿರುವ ಆಸ್ಟರ್ ಸಿಎಂಐ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಸಾಗರ್ ಭಟ್ಟದ್.

'ಕಳೆದ ಎರಡು ತಿಂಗಳಿಂದ ಈಚೆಗೆ ಬೆಂಗಳೂರಿನಲ್ಲಿ ಈ ಸೋಂಕಿಗೆ ಎರಡು ಮಕ್ಕಳು ತುತ್ತಾಗಿದ್ದಾರೆ ಎಂಬುದು ಪತ್ತೆಯಾಗಿದೆ. ಇಂಥ ಮಕ್ಕಳಿಗೆ ಐವಿಐಜಿ ಇಂಜೆಕ್ಷನ್ ನೀಡುವುದು ಅನಿವಾರ್ಯ ಹಾಗೂ ಸತತವಾಗಿ ಆಂಟಿ ಬಯೋಟಿಕ್ಸ್‌ಗಳನ್ನು ಕೊಡಬೇಕಾಗುತ್ತದೆ'ಎಂದು ಹೇಳುತ್ತಾರೆ ಡಾ. ಸಾಗರ್.

ಇದುವರೆಗೆ ನಮ್ಮ ದೇಶದಲ್ಲಿ ಈ ತೀವ್ರತರವಾದ ಸೋಂಕಿಗೆ ತುತ್ತಾದ ಮಕ್ಕಳಿಗೆ ಸೂಕ್ತ ಚಿಕಿತ್ಸೆ ನೀಡಬೇಕಾದರೆ ಚಂಡೀಗಢದಲ್ಲಿ ಡಾ. ಸುರ್ಜೀತ್ ಸಿಂಗ್ ಅವರು ಸ್ಥಾಪಿಸಿದ ಆಸ್ಟರ್ ಸಿಎಂಐ ಆಸ್ಪತ್ರೆಗೇ ಹೋಗಬೇಕಾಗಿತ್ತು. ಆದರೆ ಇದೀಗ ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲೂ ಈ ಚಿಕಿತ್ಸೆಯನ್ನು ಹೊಸದಾಗಿ ಆರಂಭಿಸಲಾಗಿದೆ. ರೋಗನಿರೋಧಕ ಶಕ್ತಿ ತೀವ್ರವಾಗಿ ಕಡಿಮೆ ಇರುವ ಮಕ್ಕಳಿಗೆ ಈಗ ಇಲ್ಲಿ ಚಿಕಿತ್ಸೆ ಲಭ್ಯ.

'ಪ್ರಾಥಮಿಕ ರೋಗ ನಿರೋಧಕ ಶಕ್ತಿ (ಪಿಐಡಿ) ಅತ್ಯಂತ ವಿರಳ ರೀತಿಯ ರೋಗವಾಗಿದ್ದು, ವಂಶವಾಹಿಗಳ ಮೂಲಕ ಮಗುವಿಗೆ ವರ್ಗಾವಣೆಯಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಮಗುವಿನ ರೋಗನಿರೋಧಕ ವ್ಯವಸ್ಥೆಯಲ್ಲಿ ಲೋಪವಿದ್ದು ಇದರಿಂದ ಅತ್ಯಂತ ಸಣ್ಣ ಸೋಂಕು ಉಂಟಾದರೂ ಮಗು ಬಹಳ ತೊಂದರೆ ಅನುಭವಿಸುತ್ತದೆ. ಶ್ವಾಸಕೋಶಗಳು, ಪಚನಾಂಗ ವ್ಯವಸ್ಥೆ ಮುಂತಾದವುಗಳು ಮೊದಲು ಸೋಂಕಿಗೆ ಗುರಿಯಾಗುತ್ತವೆ. ಆದ್ದರಿಂದ ಇದನ್ನು ಸಾಮಾನ್ಯ ಸೋಂಕು ಎಂದು ತಪ್ಪಾಗಿ ಅರ್ಥ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ' ಎನ್ನುತ್ತಾರೆ ಡಾ.ಸಾಗರ್.

## ರೋಗದ ತಪ್ಪು ಗ್ರಹಿಕೆ

'ಪಿಐಡಿಯಿಂದ ಬಳಲುವ ಮಕ್ಕಳನ್ನು ಹಲವಾರು ಬಾರಿ ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ ಅಲ್ಲದೆ ಇಂತಹ ಮಕ್ಕಳಿಗೆ ಹಲವಾರು ಆಂಟಿ ಬಯಾಟಿಕ್‌ಗಳನ್ನು ನೀಡಬೇಕಾಗುತ್ತದೆ, ಆದರೆ ಹಲವಾರು ಬಾರಿ ಆಸ್ಪತ್ರೆ ದಾಖಲು ಮಾಡಿ ಔಷಧಿ ಕೊಡಿಸಿದರೂ ಮೂಲ ತೊಂದರೆ ಗೊತ್ತೇ ಆಗುವುದಿಲ್ಲ. ಅಥವಾ ರೋಗದ ಮೂಲವನ್ನು ತಪ್ಪಾಗಿ ಗುರುತಿಸಲಾಗುತ್ತದೆ.ಇದರಿಂದ ಮಕ್ಕಳಲ್ಲಿ ರೋಗನಿರೋಧಕ ಶಕ್ತಿಯ ಕೊರತೆಯೂ ಹೆಚ್ಚಾಗುತ್ತಿದೆ' ಎಂದು ಹೇಳುತ್ತಾರೆ ಆಸ್ಟರ್ ಸಿಎಂಐನಲ್ಲಿನ ಮಕ್ಕಳ ತೀವ್ರ ನಿಗಾ ಘಟಕದ ತಜ್ಞ ವೈದ್ಯರಾದ ಡಾ. ಚೇತನ್ ಜಿಂಗೇರಿ.

'ಪುಟ್ಟ ಮಕ್ಕಳಿಗೆ ಬರುವ ಇಂತಹ ಅಪರೂಪದ ಆದರೆ ತೀವ್ರ ಕಾಡುವ ಆರೋಗ್ಯ ತೊಂದರೆಗೆ ಚಿಕಿತ್ಸೆ ಬಹಳ ದುಬಾರಿ. ಇದರಿಂದ ಮಕ್ಕಳು ಸಾವಿಗೀಡಾಗುವ ಸಾಧ್ಯತೆಯೂ ಇರುವುದರಿಂದ ಸರ್ಕಾರ ಬಡ ರೋಗಿಗಳೊಂದಿಗೆ ಕೈಜೋಡಿಸಬೇಕು. ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಚುಚ್ಚುಮದ್ದುಗಳು ಲಭಿಸುವಂತೆ ಮಾಡಬೇಕು. ಪಿಐಡಿ ಹೊಂದಿರುವ ಮಕ್ಕಳ ಚಿಕಿತ್ಸೆಗೆ ಲಯನ್ಸ್ ಕ್ಲಬ್ ಸೇರಿದಂತೆ ಕೆಲವು ಸ್ವಯಂಸೇವಾ ಸಂಸ್ಥೆಗಳು ಮುಂದೆ ಬಂದಿವೆ. ಸರ್ಕಾರವೂ ಈ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಾಗಿದೆ' ಎಂದು ಹೇಳುತ್ತಾರೆ ರೋಗಿ ಬೆಂಬಲ ಸಮೂಹ (ಪೇಷೆಂಟ್ ಸಪೋರ್ಟ್ ಗ್ರೂಪ್)ದ ಕಾರ್ಯದರ್ಶಿ ರುಕ್ಸಾನಾ.